ಗಳು ಬಂದು ಅನ್ಯತ್ರಕ್ಕೆ ಸೇರುತ್ತಾ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಡಾ|| ಆರ್. ನಾಗನಗೌಡ.—ಇಲ್ಲ.

---

## Admissions to Colleges.

*Q.*—115. **Sri V. R. NAIDU** (Malleswaram).—

Will the Government be pleased to state :—

(*a*) whether it has come to their notice that of late, particularly this year, many candidates were disappointed since they could not secure seats in coll g s as also Engineering and Medical Colleges ;

(*b*) the rules that were followed by the Committees appointed by Government in giving seats ;

(*c*) whether the establishment of Intermediate Colleges in some more places and one more each of Engineering and Medical Colleges in Bangalore has been included in the Second Five-Year Plan to obviate this dearth for seats ;

(*d*) if not, why it should not be included ?

*A.*—**Sri A. G. RAMACHANDRA RAO** (Minister for Law and Education).—

(*a*) Yes.

(*b*) A set of rules is placed on the table of the House.

(*c*) The Second Plan in the University Sector is under consideration.

(*d*) Does not arise in view of the answer to (*c*).

ಶ್ರೀ ವಿ. ಆರ್. ನಾಯ್ಡು.—ಕಾಲೇಜುಗಳಲ್ಲಿ ಸೀಟುಗಳ ಅಭಾವ ಇದೆ ಎಂದು ಬಹಳ ಜನಗಳು ಸರ್ಕಾರದ ವರನ್ನು ಪ್ರಾರ್ಥಿಸುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ವಿ. ಆರ್. ನಾಯ್ಡು.—ಇದಕ್ಕೆ ಏನು ಕಾರಣ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿದ್ಯಾಭ್ಯಾಸ ಬಹಳವಾಗಿ ಹೆಚ್ಚಾಗುತ್ತಾ ಇರುವುದರಿಂದ ಈಗ ಇರತಕ್ಕ institution ಗಳಲ್ಲಿ ಕೇಳುವವರೆಲ್ಲರಿಗೂ ಸೀಟುಗಳನ್ನು ಕೊಡುವುದು ಕಷ್ಟ.

ಶ್ರೀ ವಿ. ಆರ್. ನಾಯ್ಡು.—ಇದಕ್ಕೆ ಪರಿಹಾರಮಾರ್ಗವನ್ನು ಸರ್ಕಾರದವರು ಯೋಚನೆಮಾಡಿದ್ದಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದರ ಪರಿಣಾಮವಾಗಿ ಬೆಂಗಳೂರಿನಲ್ಲಿ ಹೊಸದಾಗಿ ಮೆಡಿಕಲ್ ಕಾಲೇಜನ್ನು ಸ್ಥಾಪನೆಮಾಡಿರುವುದು ಮಾನ್ಯ ಸದಸ್ಯರಿಗೇ ಗೊತ್ತಿದೆ.

ಶ್ರೀ ವಿ. ಆರ್. ನಾಯ್ಡು.—ಅದಕ್ಕೆ ಒಂದು ಸಮಿತಿ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬೆಂಗಳೂರು ಕಾಲೇಜಿಗೆ ಸಮಿತಿ ಇದೆ.

ಶ್ರೀ ವಿ. ಆರ್. ನಾಯ್ಡು.—ಸಮಿತಿಯ ಸದಸ್ಯರನ್ನು ಚುನಾವಣೆ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿನ ಕೆಲಸವನ್ನು ನಿರ್ವಹಣೆಮಾಡುವುದಕ್ಕೆ ಯೋಗ್ಯತೆ ಇರುವವರನ್ನು ಚುನಾಯಿಸಿದ್ದೇವೆ.

ಶ್ರೀ ವಿ. ಆರ್. ನಾಯ್ಡು.—ಪ್ಯೂನರ್ ಕಮ್ಯೂನಿಟಿಯವರು ಆ ಸಮಿತಿಯಲ್ಲಿ ಇದ್ದಾರೆಯೇ ?

ಶ್ರೀ ಎ. ಜಿ ರಾಮಚಂದ್ರರಾವ್.—ನನಗೆ ಜ್ಞಾಪಕವಿರುವ ಹಾಗೆ ಬಹಳ ಜನರಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ವಿದ್ಯಾರ್ಥಿಗಳಿಗೆ ಇರತಕ್ಕ ತೊಂದರೆಗಳನ್ನು ವರ್ಷವರ್ಷವೂ ಸರ್ಕಾರದವರ ಗಮನಕ್ಕೆ ತರುತ್ತಿದ್ದೇನೆ Intermediate College ಅಥವಾ Engineering College ಗಳನ್ನು ಮಾಲ್ಲೇಶ್ವರದ ಬಡಾವಣೆಗಳಲ್ಲಿ ಸ್ಥಾಪನೆಮಾಡಲು ಯೋಚನೆ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—Intermediate College ಮಾಡುವುದೇ ಬಹಳ ಕಷ್ಟವಾಗಿದೆ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ.

ಶ್ರೀ ವಿ. ವಿ. ನರಸಿಂಹರೆಡ್ಡಿ.—ಮೆಡಿಕಲ್ ಕಾಲೇಜು ಸ್ಥಾಪನೆಯಾಗಿರುವುದು ಖಾಸಗಿ ಕಾಲೇಜ್ ಅಥವಾ ಸರ್ಕಾರದ ಕಾಲೇಜ್ ಆಗಿದೆಯೇ ?

**Sri A. G. RAMACHANDRA RAO.**—It is an aided institution.

ಶ್ರೀ ವಿ. ವಿ. ನರಸಿಂಹರೆಡ್ಡಿ.—Aided institution ಗೆ ನರಕಾರದವರು ಸಮಿತಿ ನೇಮಿಸಲು ಅವಕಾಶ ಇದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ institution management ವಿಚಾರದಲ್ಲಿ ಸರ್ಕಾರದವರು ಪತ್ರವ್ಯವಹಾರ ನಡೆಸಿ ಒಂದು ಸೂಕ್ತವಾಗಿರತಕ್ಕ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ.

ಶ್ರೀ ವಿ. ವಿ. ನರಸಿಂಹರೆಡ್ಡಿ.—ಎಂದರೆ ಖಾಸಗೀ ಜನರು ಸೇರಿ ಸಂಸ್ಥೆ ಪ್ರಾರಂಭಮಾಡಿದರು. ನರಕಾರದವರು ಅದಕ್ಕೆ recognition ಕೊಟ್ಟು ಗ್ರಾಂಟು ಕೊಟ್ಟರು. ಆದರೆ ನರಕಾರದ ಹತೋಟಿ ಸಮಿತಿಯ ಮೇಲೆ ಇರುವುದಿಲ್ಲ, ಅಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—University regulations ಅನುಸಾರವಾಗಿ ನಾವು ನಡೆಯುತ್ತೇವೆ.

ಶ್ರೀ ವಿ. ವಿ. ನರಸಿಂಹರೆಡ್ಡಿ.—University ಯವರು ಹೇಗೆ ತಮ್ಮ ಕಾಲೇಜನ್ನು ನಡೆಸುತ್ತಾರೋ ಅದೇ ರೀತಿ recognition ಕೊಡಬೇಕಾದರೆ ಈ ಸಂಸ್ಥೆಯನ್ನೂ ನಡೆಸಬೇಕಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—University regulation ಪ್ರಕಾರವೇ ನಡೆಯಬೇಕಾಗುತ್ತದೆ.

ಶ್ರೀ ವಿ. ವಿ. ನರಸಿಂಹರೆಡ್ಡಿ.—Admission ಮೊದಲುಗೊಂಡು audit ಮುಂತಾದ ಎಲ್ಲ ವಿಷಯಗಳಲ್ಲಿಯೂ ಯೂನಿವರ್ಸಿಟಿಯ ಕ್ಯಾಲೆಂಡರನ್ನು ಅನುಸರಿಸಬೇಕು, ಅಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯೂನಿವರ್ಸಿಟಿ ಕ್ಯಾಲೆಂಡರನ್ನೇ ಅವರು ಅನುಸರಿಸುವುದು. ಅದು ಒಂದು affiliated institution ಆದ್ದರಿಂದ affiliated institutions ಗೆ ಯಾವ ಯಾವ regulations ಇವೆಯೋ ಅವುಗಳನ್ನು ಅನುಸರಿಸುತ್ತಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—University institution ನಲ್ಲಿ ವಿದ್ಯಾರ್ಹತೆಯ ಮೇಲೆ admission ಕೊಡುವ ಹಾಗೆ ಈ ಕಾಲೆಜಿಗೂ admission ಕೊಡುತ್ತಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆ admission rules ಮಾಡಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ Institution ನಲ್ಲಿ donation ತೆಗೆದುಕೊಂಡು admission ಮಾಡುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗಾದರೆ ಅರ್ಹತೆ ದುಡ್ಡು ಕೊಡುವುದೇ ಅಥವಾ ಯೂನಿವರ್ಸಿಟಿಯವರು ಗೊತ್ತು ಮಾಡಿರುವ ಅರ್ಹತೆಯೆ?

ಶ್ರೀ ಎ. ಜಿ. ರಾಮಚಂದ್ರರಾವ್.—Affiliated institutions 50ಷ್ಟು ಭಾಗವಾದರೂ ಸೇರಿಸಿಕೊಳ್ಳುವುದಕ್ಕೆ ಪೂರ್ಣ ಅವಕಾಶವಿದೆ. ಇನ್ನು ಉಳಿದ 50 ಭಾಗವನ್ನು ಸರಕಾರದವರು ಮಾಡಿದ ರೂಲ್ಸ್ ಪ್ರಕಾರ admission ಮಾಡುತ್ತಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇಂತಹ ಒಂದು ನಿಯಮ ಯೂನಿವರ್ಸಿಟಿ ರೂಲ್ಸ್‌ಗೆ ಅನುಸಾರವಾಗಿ ಇದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆ ವಿರೋಧವಾಗಿ ಏನೂ ಕಂಡುಬಂದಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ವಿಚಾರದಲ್ಲಿ ಸರಕಾರದವರು ತಮಗೆ ತೋಚಿದ ರೀತಿಯಲ್ಲಿ ಆಡಳಿತ ನಡೆಸಿದರೆ ಸಾಕೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಮಾಡಿರುವ ಏರ್ಪಾಡು ಸಮರ್ಪಕವಾಗಿದೆಯೆಂದು ಅಭಿಪ್ರಾಯ.

**Sri M. PALANIYAPPAN.**—Have the Government framed rules for admissions to these technical colleges?

**Sri A. G. RAMACHANDRA RAO.**—The University has framed the rules.

**Sri M. PALANIYAPPAN.**—Do not those rules apply to these private medical colleges?

**Sri A. G. RAMACHANDRA RAO.**—Certainly, they will apply to them also.

**Sri M PALANIYAPPAN.**—You were pleased to say that 50 per cent of the seats were admitted on donations. Do they not come within the purview of these rules?

**Sri A. G. RAMACHANDRA RAO.**—There is no prohibition under the Rules.

**Sri M. PALANIYAPPAN.**—Are admissions according to the rules framed by the Government? Are the 50 per cent seats that have been allotted on donation system given according to the rules framed by the Government?

**Sri A. G. RAMACHANDRA RAO.**—No rules are framed by the Government. But they are proceeding on some definite understanding.

**Sri M. PALANIYAPPAN.**—.—Have the Government passed any orders permitting them to take donations and allot 50 per cent of the seats?

**Sri A. G. RAMACHANDRA RAO.**—The Government have accepted that arrangement.

---

## Medical School.
## (Allotment of seats by Government)

*Q.*—595. **Srimathi B. L. SUBBAMMA** (Chikmagalur-Mudigere).—

Will the Government be pleased to state:—

(*a*) the number of seats allotted by the Committee this year in the Medical School;

(*b*) whether it is true that Government have allotted some seats;

(*c*) the names of the students, their district and community?

*A.*—**Sri A. G. RAMACHANDRA RAO** (Minister for Law and Education).—

(*a*) 100.

(*b*) Yes.

(*c*) *Vide* list in the appendix.

It is presumed that (*c*) relates to (*b*).

[*Vide* REPLY TO CLAUSE (*c*)]

| *District* | | | *Names of Candidates* | | *Community* |
|---|---|---|---|---|---|
| Shimoga | ... | 1 | Gurubasappa, S G | ... | Lingayat |
| | | 2 | Govindaswamy, H K | ... | Vokkaliga |
| | | 3 | Dharmana Gowda, H K | ... | Do |
| | | 4 | Jatya Naik ... | ... | Deevaru |
| | | 5 | Josephine D'Souza (W) | ... | Christian |
| | | 6 | Malleswarappa, T S | ... | Lingayat |
| Hassan | ... | 7 | Mogappa Setty, S C | ... | Do |
| | | 8 | Thimmappa, T ... | ... | Bestha |